# ತೊರೆಯ ನೀರಿನಲ್ಲಿ ಚಿನ್ನದ ಉರಿಡೆಗಳು



■ ಜಿ.ವಿ. ಅರುಣ

**ತೊರೆಯ ನೀರಿನಲ್ಲಿ, ಆ ನೀರಿನ ಮಡ್ಡಿಯಲ್ಲಿ ಚಿನ್ನದ ಕಣಗಳು ದೊರೆಯುವುದರ ಬಗ್ಗೆ ದಂತಕಥೆಗಳಂಥ ಕಥೆಗಳು ಸಾಕಷ್ಟಿವೆ. ಹೀಗೆ ನೀರಿನೊಂದಿಗೆ ಹರಿದುಬರುವ ಚಿನ್ನವನ್ನು ಸೋಸಿ ತೆಗೆವ ಕಸುಬುದಾರರೂ ಇದ್ದಾರೆ. ಈ ಚಿನ್ನದ ಆಸೆ ಸೃಷ್ಟಿಸಿದ ಅನೇಕ ಕೋಲಾಹಲಗಳಿಗೆ ಇತಿಹಾಸ ಸಾಕ್ಷಿಯಾಗಿದೆ. ಕ್ಯಾಲಿಫೋರ್ನಿಯಾ ಗೋಲ್ಡ್ ರಶ್! ಆಸ್ಟ್ರೇಲಿಯಾ ಗೋಲ್ಡ್ ರಶ್ – ಇವೆಲ್ಲ ಚಿನ್ನದ ಬೇಟೆಯ ಕಥೆಗಳಷ್ಟೇ ಅಲ್ಲ, ಮಾಯಾಮೃಗದ ಬೆನ್ನೇರಿದ ಮನುಷ್ಯ ಸೃಷ್ಟಿಸಿದ ಅನಾಹುತಗಳ ಕಥನಗಳೂ ಹೌದು.**

ಚಿನ್ನದ ಬೇಟೆ

ಮಹಾಭಾರತದಲ್ಲಿ ಅರ್ಜುನನಿಗೆ ತೊರೆಯ ನೀರಿನ ತಳದಲ್ಲಿ ಚಿನ್ನವು ಸಿಕ್ಕಿತ್ತಂತೆ! ಅದೇ ರೀತಿ ನೀವು ಪರ್ವತ ಪ್ರದೇಶದಲ್ಲಿ ವಿಹರಿಸುತ್ತ ಅಲ್ಲಿನ ಕಣಿವೆಯಲ್ಲಿ ಹರಿಯುತ್ತಿರುವ ತಿಳಿನೀರಿನ ತೊರೆಯಲ್ಲಿ ಪಾದವನ್ನು ತೋಯಿಸುತ್ತ ನಡೆಯುತ್ತಿದ್ದೀರಿ ಎಂದುಕೊಳ್ಳಿ. ತಕ್ಷಣ ನಿಮ್ಮ ಕಣ್ಣಿಗೆ ಹೊಳೆಯುತ್ತಿರುವ ಕಲ್ಲಿನ ಗಟ್ಟಿ ಒಂದು ಸಿಕ್ಕಿದರೆ ಏನು ಮಾಡುತ್ತೀರಿ? ಅದು ಚಿನ್ನದ ಗಟ್ಟಿಯಾದರೆ ಸಿಕ್ಕಿದವರಿಗೆ ಸೀರುಂಡೆ ಅಲ್ಲವೇ!

ಹಿಂದೆ ಪ್ರಪಂಚದ ಅನೇಕ ಕಡೆಗಳಲ್ಲಿ ಈ ರೀತಿ ತೊರೆಗಳಲ್ಲಿ ಚಿನ್ನವು ದೊರಕಿದ ದಾಖಲೆಗಳಿವೆ. ಚಿನ್ನದ ನಿಕ್ಷೇಪವಿರುವ ಕಡೆ ಬೆಟ್ಟದ ಮೇಲಿರುವ ಕಲ್ಲು ಮಣ್ಣುಗಳಲ್ಲಿ ಅವು ಸೇರಿಕೊಂಡಿರುತ್ತಿದ್ದವು. ವಾತಾವರಣದ ಚಳಿ, ಮಳೆ, ಬಿಸಿಲು, ಗಾಳಿಗೆ ಸಿಲುಕಿ ಶಿಥಿಲಗೊಂಡ ಮೇಲ್ಮೈನಿಂದ ನೀರಿನ ಜೊತೆ ಮೆಕ್ಕಲಮಣ್ಣು ಕೆಳಗಿಳಿದು, ತೊರೆಯನ್ನು ಸೇರಿ, ಕಣಿವೆಯಿಂದ ಮುಂದೆ ನದಿಗೆ ಸೇರುತ್ತದೆ. ಹೀಗೆ ಮಳೆಗಾಲದಲ್ಲಿ ಬೆಟ್ಟಗುಡ್ಡಗಳಿಂದ ಅಗಾಧ ಪ್ರಮಾಣದಲ್ಲಿ ಮೆಕ್ಕಲು ಮಣ್ಣು ತೊರೆಗಳಿಗೆ ಬಂದು ಸೇರುತ್ತವೆ. ಅವುಗಳೊಂದಿಗೆ ಚಿನ್ನದ ಗಟ್ಟಿಯೋ ಬಂಡೆಯೋ ಉಂಡೆಯೋ ಕಲ್ಲಿನಿಂದ ಕಳಚಿಕೊಂಡು ಬಂದು ತೊರೆಯಲ್ಲಿ ಮೆಕ್ಕಲುಮಣ್ಣಿನಲ್ಲಿ ಸೇರಿಕೊಂಡಿರುತ್ತಿದ್ದವು. ಚಿನ್ನದ ತೂಕವು ಮಣ್ಣಿಗಿಂತ ಏಳು ಪಟ್ಟು ಹೆಚ್ಚಾಗಿರುವುದರಿಂದ ನೀರಿನಲ್ಲಿ ಮಣ್ಣು ಕೊಚ್ಚಿಕೊಂಡು ಹೋದರೂ ಅದು ಮಾತ್ರ ನಿಧಾನವಾಗಿ ದೂರವನ್ನು ಕ್ರಮಿಸುತ್ತದೆ. ಇಂಥ ಚಿನ್ನದ ಗಟ್ಟಿಗಳು ಅರಸಿಕೊಂಡು ಹೋಗುವವರಿಗೆ ಹುಡುಕಿದಾಗ ಸಿಗುತ್ತಿತ್ತು. ಇಂಗ್ಲಿಷಿನಲ್ಲಿ ಅದನ್ನು 'ನಗೆಟ್ಸ' ಎಂದು ಕರೆಯುತ್ತಾರೆ. ಇವುಗಳಲ್ಲದೆ ಚಿನ್ನದ ಪದರ ಇರುವ ಕಲ್ಲಿನ ಚೂರುಗಳು, ಚಿನ್ನದ ಹುಡಿಗಳು ಮೆಕ್ಕಲಮಣ್ಣಿನಲ್ಲಿ ಸೇರಿಕೊಂಡಿರುತ್ತವೆ. ಹೀಗೆ ಸಿಕ್ಕುವ ಚೂರುಗಳಲ್ಲಿ ಶೇ. 80ರಿಂದ 90 ಭಾಗ ಚಿನ್ನವಿರುತ್ತದೆ.

## ಕ್ಯಾಲಿಫೋರ್ನಿಯಾ ಗೋಲ್ಡ್ ರಶ್!

ಚಿನ್ನವು ಯಾವ ರೀತಿ ಕೋಲಾಹಲವನ್ನು ಸೃಷ್ಟಿಸಬಹುದು ಎಂಬುದಕ್ಕೆ 'ಕ್ಯಾಲಿಫೋರ್ನಿಯಾ ಗೋಲ್ಡ್ ರಶ್' ಘಟನೆಗಿಂತ ಬೇರೆ ಉದಾಹರಣೆ ಬೇಕಿಲ್ಲ. ಈ ಘಟನೆಯ ವಿವರಗಳು ಚೆನ್ನಾಗಿ ದಾಖಲಾಗಿವೆ. ದಾಖಲಾಗದೇ ಇದ್ದದ್ದು ಏನೆಂದರೆ – ಸ್ಥಳವಂದಿಗರಿಗರಾಗಿದ್ದ, ಚಿನ್ನ ಅಂದರೆ ಏನು ಎಂದು ಗೊತ್ತಿಲ್ಲದೆ ಇದ್ದ, ರೆಡ್ ಇಂಡಿಯನ್ ಜನಾಂಗಕ್ಕೆ ಆದ ತೊಂದರೆ. ಅದನ್ನು ದಾಖಲಿಸಲು ಅವರು ಯಾರು ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಆ ಜನಾಂಗವು

